# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.251-2020** **ಪಿ . ಡಬ್ಲುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೃಷ್ಣ<br>ಕಳಲೆ ಗ್ರಾಮ, ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 07-03-2024. |

**<u>ಮುಂದುವರೆದ ಪಾಟೀ ಸವಾಲುಃ  ಪ್ರತಿವಾದಿ ಶ್ರೀ ಬಿ.ವೈ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ದಿ.15-09-2010 ರಲ್ಲಿ ನನ್ನ ತಂದೆಯವರು ಪ್ರತಿವಾದಿಗೆ ನಿಪಿ-1 ರ ಪ್ರಕಾರ ತಿಳುವಳಿಕೆ ನೀಡಿಸಿರುತ್ತಾರೆ ಎಂದರೆ ಸರಿ. ಸದರಿ ತಿಳುವಳಿಕೆಗೆ ಪ್ರತಿವಾದಿಗಳು ನಿಪಿ-2 ರ ಪ್ರಕಾರ ಪ್ರತ್ಯೂತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಪ್ರತ್ಯುತ್ತರವನ್ನು ನೀಡಿದ 10 ವರ್ಷಗಳ ನಂತರ ನಾನು ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯಿಂದ ಪ್ರತ್ಯುತ್ತರದ ಬಂದ ತಕ್ಷಣ ಈ ದಾವಾವನ್ನು ಸಲ್ಲಿಸಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಪ್ರತಿವಾದಿ ಪ್ರತ್ಯೂತ್ತರವನ್ನು ನೀಡಿದ ನಂತರ ನಮ್ಮ ವಿರುದ್ಧ ದಾವಾವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಸಲ್ಲಿಸಿದ್ದ ದಾವೆಯೂ 7-8 ವರ್ಷಗಳ ಕಾಲದ ನಡೆದಿರುತ್ತದೆ ಎಂದೆ ಸರಿ. ಪ್ರತಿವಾದಿ ಸಲ್ಲಿಸಿದ್ದ ದಾವಾದ ಫಲಿತಾಂಶವನ್ನು ನೋಡಿದ ನಂತರ ನಾವು ಸಲ್ಲಿಸೋಣ ಎಂದ ನಮ್ಮನಿದ್ದೆವು ಎಂದರೆ ಸರಿ. ಪ್ರತಿವಾದಿ ಸಲ್ಲಿಸಿದ್ದ ದಾವಾವು ಭಾಗಶಃ ಡಿಕ್ರಿಯಾಗಿದ್ದು, ಸದರಿ ದಾವಾ ಡಿಕ್ರಿಯಾದ ನಂತರ ನಾವು ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ನನ್ನ ತಂದೆಯವರು ಪ್ರತಿವಾದಿಗೆ ನಿಪಿ-1 ರ ಪ್ರಕಾರ ನೋಟಿಸ್ ನೀಡಿದಾಗ ನಾನು ಮತ್ತು ನನ್ನ ಸಹೋದರ  ವ್ಯಾಪಾರ ಮಾಡುತ್ತಿದ್ದೆವು ಎಂದರೆ ಸರಿ. ಆ ಸಮಯ ನನ್ನ ತಂದೆಯವರು ಸಹ ವ್ಯಾಪಾರ ಮಾಡುತ್ತಿದ್ದರು. ನಿಪಿ-1 ಅನ್ನು ನೀಡಿದ ಸಮಯ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ವ್ಯಾಪಾರ ಮಾಡುತ್ತಿದ್ದುದ್ದರಿಂದ ಸಾಕಷ್ಟು

ಆದಾಯವಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಜೀವನೋಪಾಯಕ್ಕೆ ಸಾಕಾಗುವಷ್ಟು ಆದಾಯ ಇತ್ತು ಎಂದು ನುಡಿಯುತ್ತಾರೆ. ಪ್ರತಿವಾದಿಗೆ ನಾವು ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ನೀಡಲು ಒಪ್ಪಿದ್ದರಿಂದ ನಮಗೆ ಸಾಕಷ್ಟು ಆದಾಯ ಇದ್ದರೂ ಸಹ ನಿಪಿ-1 ಅನ್ನು ಪ್ರತಿವಾದಿಗೆ ನೀಡಿದ ನಂತರ ಭೋಗ್ಯ ತೀರುವಳಿಗಾಗಿ ದಾವಾ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಭೋಗ್ಯದ ಕರಾರು ಪತ್ರದಲ್ಲಿ ಕಾಣಿಸಿರುವ ಒಕ್ಕಣೆಯೂ ಸಾಮಾನ್ಯವಾಗಿ ಎಲ್ಲಾ ಭೋಗ್ಯ ಪತ್ರಗಳಲ್ಲಿ ಕಾಣಿಸುವ ಒಕ್ಕಣೆ ಆಗಿರುತ್ತದೆ ಎಂದರೆ ಸರಿ. ನಾವು ಪ್ರತಿವಾದಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಕೊಡಲು ಒಪ್ಪಿದ್ದರೂ ಭೋಗ್ಯದ ಕರಾರಿನಲ್ಲಿ ಇರುವ ಒಕ್ಕಣೆಯನ್ನು ದುರುಪಯೋಗಪಡಿಸಿಕೊಂಡು ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಭೋಗ್ಯದ ಕರಾರಿನಲ್ಲಿರುವ ಒಕ್ಕಣೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಅರ್ಥೈಸಿಕೊಂಡು ಪ್ರತಿವಾದಿ ವಿರುದ್ಧ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಭೋಗ್ಯ ಪತ್ರದ ಒಕ್ಕಣೆಯನ್ನು ಓದಿ ತಿಳಿದುಕೊಂಡಿರುತ್ತೇನೆ ಭೋಗ್ಯವಾದ ನಂತರ ದಾವಾ ಷೆಡ್ಯೂಲ್ ಸ್ವತ್ತು ಪ್ರತಿವಾದಿಯವರ ತಂದೆಯವರ ಸ್ವಾಧೀನದಲ್ಲಿ ಇದ್ದು, ಅವರ ಮರಣಾನಂತರ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಭೋಗ್ಯವಾದ ಸಮಯ ಖುಷ್ಕಿ ಜಮೀನು ಎಂದರೆ ಸರಿ. ನಾನು ದಾವಾ ಷೆಡ್ಯೂಲ್ ಸ್ವತ್ತನ್ನು ನೋಡಿರುತ್ತೇನೆ. ಈಗ ಪ್ರತಿವಾದಿಯೂ ದಾವಾ ಷೆಡ್ಯೂಲ್ ಸ್ವತ್ತನ್ನು ಆಬಾದು ಮಾಡಿ ನೀರಾವರಿ ಜಮೀನನ್ನಾಗಿ ಮಾಡಿರುತ್ತಾರೆ ಎಂದರೆ ಸಾಕ್ಷಿ 1 ಎಕರೆ ಜಮೀನನ್ನು ನೀರಾವರಿ ಜಮೀನನ್ನಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಕಬಿನಿ ನಾಲೆಯಿಂದ ನೀರು ಬರುತ್ತದೆ. ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಪರಿವರ್ತನೆ ಮಾಡಬೇಕಾದರೆ ಸಾಕಷ್ಟು ಖರ್ಚಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಗೆ ಜಮೀನಿಂದ ಸಾಕಷ್ಟು ಆದಾಯ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಅಭಿವೃದ್ಧಿ ಪಡಿಸಿರುವ ಕಾರಣ ಅವರಿಗೆ ಆದಾಯ ಬರುತ್ತಿರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿಗೆ ಬೀರುವಾಳು ನಾಲೆಯಿಂದ ನೀರು ಬರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಕೆಳಭಾಗದಲ್ಲಿ ಬೀಚನಹಳ್ಳಿ ನಾಲೆ ಇರುತ್ತದೆ

ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲ್ಭಾಗದಲ್ಲಿ ಬೀರುವಾಳು ನಾಲೆ ಇರುತ್ತದೆ ಎಂದರೆ ಸರಿ. ಸದರಿ ಬೀರುವಾಳು ನಾಲೆಯಿಂದ ನೀರು ಬಿಟ್ಟಾಗ ದಾವಾ ಷೆಡ್ಯೂಲ್ ಸ್ವತ್ತಿಗೆ ನೀರು ಬರುತ್ತದೆ ಎಂದರೆ ಸರಿ. ಬೀರುವಾಳು ನಾಲೆಯಿಂದ ನೀರು ಬರಬೇಕಾದರೆ ಒಳ್ಳೆ ಮಳೆ ಆಗಬೇಕು ಎಂದರೆ ಸರಿ. ದಾವಾ ಷೆಡ್ಯೂಲ್ ಸರ್ವೇ ನಂಬರಿನ ಉಳಿದ ವಿಸ್ತೀರ್ಣದ ಜಮೀನು ಪುಟ್ಟಮ್ಮ ನವರಿಗೆ ಭೋಗ್ಯವಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ ದಾವಾ ಷೆಡ್ಯೂಲ್ ಸ್ವತ್ತನ್ನು ಭೋಗ್ಯ ಬಿಡುಗಡೆ ಮಾಡಿಸಿಕೊಳ್ಳುವಂತೆ ಕೇಳಿದಾಗ ನನ್ನ ತಂದೆಯವರು ಭೋಗ್ಯ ಬಿಡುಗಡೆ ಮಾಡಿಸಿಕೊಳ್ಳಲು ಹಣಕಾಸಿನ ತೊಂದರೆ ಇರುವುದರಿಂದ ಪ್ರತಿವಾದಿಯನ್ನೇ ಕ್ರಯಕ್ಕೆ ಪಡೆಯುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಪ್ರತಿವಾದಿಯೂ ಸಹ ಅಂದಿನ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ಪಡೆಯಲು ಒಪ್ಪಿದ್ದರು ಎಂದರೆ ಸರಿಯಲ್ಲ ಆ ರೀತಿ ಒಪ್ಪಿಕೊಂಡ ನಂತರವೇ ಪ್ರತಿವಾದಿ ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಪರಿವರ್ತನೆ ಮಾಡಬೇಕಾದರೆ ಅದಕ್ಕೆ ಸಾಕಷ್ಟು ವರ್ಷಗಳ ಮತ್ತು ಪರಿಶ್ರಮ ಬೇಕಾಗುತ್ತದೆ ಎಂದರೆ ಸರಿ. ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಪರಿವರ್ತಿಸುವ ಸಮಯ ಪ್ರತಿವಾದಿಗೆ ನೋಟಿಸ್ ನೀಡಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**